## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,
ಸಿರುಗುಪ್ಪ

**ಸಿ.ಸಿ.ನಂ.: 1784/2024**

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಸಹಾಯಕ ಆರಕ್ಷಕ ಉಪ-ನಿರೀಕ್ಷಕರು,
ಸಿರುಗುಪ್ಪ ಪೊಲೀಸ್ ಠಾಣೆ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.

ವಿರುದ್ಧ

| | |
|---|---|
| ಆಪಾಧಿತರು :- | 1. ಮಹೇಶ ಬಿನ್ ಶೇಕಪ್ಪ ವಃ 19 ವರ್ಷ,<br>2. ಗಣೇಶ ಬಿನ್ ಹುಲುಗಪ್ಪ, ವಃ 19 ವರ್ಷ,<br>3. ಹನುಮೇಶ ಬಿನ್ ಮಲ್ಲಪ್ಪ, ವಃ 19 ವರ್ಷ,<br>4. ಭರತ್ ಬಿನ್ ರಾಮ , ವಃ 19 ವರ್ಷ,<br>5. ರಘು ಬಿನ್ ರಾಜಪ್ಪ, ವಃ 20 ವರ್ಷ,<br><br>ಎಲ್ಲರ ವಾಸಃ 19 ನೇ ವಾರ್ಡ್, ಸಿರುಗುಪ್ಪ ಟೌಃ ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ. |

ನಾನು ಅಶೋಕ ಆರ್.ಹೆಚ್., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿರುಗುಪ್ಪ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ..

## ದೋಷಾರೋಪಣೆ

ದಿನಾಂಕ **10-04-2024** ರಂದು ರಾತ್ರಿ **9.00** ಗಂಟೆ ಸುಮಾರಿಗೆ ಸಿರುಗುಪ್ಪ ಪೊಲೀಸ್ ಠಾಣಾ ಸರಹದ್ದಿನಲ್ಲಿ, ಚಾಸಾ-1 ರವರು ಚಾಸಾ-4 ರವರೊಂದಿಗೆ ಸಿರುಗುಪ್ಪ-ಆದೋನಿ ರಾಜ್ಯ ಹೆದ್ದಾರಿ-63 ರಸ್ತೆಯಲ್ಲಿ ಬರುವ ತಾಯಮ್ಮ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ರಾತ್ರಿ **9.00** ಗಂಟೆ ಸುಮಾರಿಗೆ ವಾಪಸ್ಸು ಮನೆಯ ಕಡೆಗೆ ಬರುತ್ತಿರುವಾಗ ತಾಯಮ್ಮ ದೇವಸ್ಥಾನದ ಹತ್ತಿರ ಬೆಳಿಗ್ಗೆ ಅಂಬಾನಗರದ ವ್ಯಕ್ತಿಗಳು, ವಿಜಯ ವಿಠಲನಗರದ ಜನರೊಂದಿಗೆ ಹೋಳಿ ಆಡುವ ಸಮಯದಲ್ಲಿ ನಡೆದ ಜಗಳವನ್ನು ಮನಸ್ಸಿನಲ್ಲಿಟ್ಟುಕೊಂಡು ಅಂಬಾನಗರದ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಅಕ್ರಮ ಕೂಟದ ಸದಸ್ಯರಾಗಿ ಸೇರಿ ಚಾಸಾ-1 ಮತ್ತು 4 ರವರೊಂದಿಗೆ ಜಗಳ ತೆಗೆದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 143 ರ

ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿ ದೊಂಬಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 147 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ನಿಮ್ಮ ಸಮಾನ ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಮಾರಕಾಸ್ತ್ರಗಳಾದ ಸೈಕಲ್ ಚೈನ್ ಹಿಡಿದುಕೊಂಡು ದೊಂಬಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾ. ದಂ. ಸಂ. ಕಲಂ.**148** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-1 ರವರಿಗೆ ನೋಡಿ ಲೇ ಸೂಳೇ ಮಗನೇ ಹೋಳಿ ಆಡುವ ಸಮಯದಲ್ಲಿ ನಿಮ್ಮ ಸ್ನೇಹಿತರೊಂದಿಗೆ ಬಂದು ಜಗಳ ಮಾಡುತ್ತೀರಾ ಮಗನೇ ಎಂದು ದುರ್ಭಾಷೆಗಳಿಂದ ಬೈದು, ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನುಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ದುರ್ಭಾಷೆಗಳಿಂದ ಬೈದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 149 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಸಮಾನ ಉದ್ದೇಶ ಹೊಂದಿದ ಆರೋಪಿತರಾದ ನೀವೆಲ್ಲರೂ ಚಾಸಾ-1 ರವರಿಗೆ ಕೈಗಳಿಂದ ಹೊಡಿಬಡಿ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾ.ದಂ.ಸಂ.ಕಲಂ.323 ಸಹವಾಚಕ 149 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ನಿಮ್ಮ ಸಮಾನ ಏಕೋದ್ದೇಶದಿಂದ ನಿಮ್ಮಗಳ ಪೈಕಿ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ಸೈಕಲ್ ಚೈನಿನಿಂದ ಚಾಸಾ-1 ರವರ ಬಲ ಕಿವಿಯ ಹಿಂದಿನ ಭಾಗಕ್ಕೆ ಗುದ್ದಿ ರಕ್ತ ಗಾಯ ಮಾಡಿದ್ದು,

ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾ.ದಂ.ಸಂ.ಕಲಂ.324 ಸಹವಾಚಕ 149 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-1 ರವರಿಗೆ ಲೇ ಮಗನೇ ಇವತ್ತು ನೀನು ಬದುಕಿದ್ದೀಯಾ ನೀನು ಹೇಗೆ ತಿರುಗಾಡುತ್ತೀಯಾ ಮುಂದೆ ನಿನಗೆ ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 149 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

(ಅಶೋಕ್ ಆರ್.ಹೆಚ್.)

**ದಿನಾಂಕಃ** 06.08.2026 ಪ್ರ.ದ.ನ್ಯಾ.ದಂ., ಸಿರುಗುಪ್ಪ.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
ಸಿರುಗುಪ್ಪ

**ಸಿ.ಸಿ.ನಂ.: 1784/2024**

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಸಹಾಯಕ ಆರಕ್ಷಕ ಉಪ-ನಿರೀಕ್ಷಕರು,
ಸಿರುಗುಪ್ಪ ಪೊಲೀಸ್ ಠಾಣೆ, ಸಿರುಗುಪ್ಪ, ಬಳ್ಳಾರಿ ಜಿಲ್ಲೆ.

ವಿರುದ್ಧ

ಆರೋಪಿತರು ಃ

ಆರೋಪಣೆ

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?
ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿತರಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).

**ದಿನಾಂಕಃ** 06.08.2026. **ಪ್ರ. ದ. ನ್ಯಾ. ದಂ., ಸಿರುಗುಪ್ಪ.**